**ದಿಃ20.08.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ** ಶ್ರೀ ಎಸ್.ಎಸ್.ಬಿ. ವಕೀಲರಿಂದಃ ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ. ಒಂದು ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು , ಪ್ರತಿವಾದಿಯ ಸಹಿಗಳನ್ನು ನಿಪಿ 1 (ಎ) ಯಿಂದ ನಿಪಿ 1 (ಜಿ) ಎಂದು, ಸಾಕ್ಷಿದಾರರಾದ ರಾಕೇಶ್ ಮತ್ತು ಸುಲೇಮಾನ್ ರವರ ಸಹಿಗಳನ್ನು ನಿಪಿ 1 (ಹೆಚ್) ಮತ್ತು ನಿಪಿ 1 (ಐ) ಎಂದು , ವಾದಿಯ ಸಹಿಯನ್ನು ನಿಪಿ 1(ಜೆ) ಎಂದು , ವಕೀಲರ ಕಛೇರಿ ತಿಳುವಳಿಕೆ ಪತ್ರವನ್ನು ನಿಪಿ 2 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ 3 ಎಂದು, 2 ಜವಾಬು ನೋಟೀಸ್ ಗಳನ್ನು ನಿಪಿ 4 ಮತ್ತು ನಿಪಿ 5 ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-
(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.